ಯಿಯ ಆಶೆಗಾಗಿ ನನ್ನನ್ನು ಹಿಡಿದು ಕೊಟ್ಟದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ, ಯಾಕಂದರೆ ಕುಬೇರನ ಸಂಪತ್ತಿಯಲ್ಲಿ ಹೊರಳಾಡುವ ನಿಮ್ಮ ಇಂಗ್ಲಂಡದಲ್ಲಿ ಸ್ವತಃ ಭಾರತ ಮಂತ್ರಿಯಾಗಿರುವ ಲಾರ್ಡ ಅಮರಿಯವರ ಮಗ ದುಡ್ಡಿನ ಆಶೆಗಾಗಿ ಈ ಯುದ್ಧದಲ್ಲಿ ಹಿಟ್ಲರನಿಗೆ . ಫಿತೂರಿಯಾಗಿಲ್ಲವೇ ಇದಕ್ಕೇನು ಹೇಳುವಿರಿ?" ಎಂದು ಕೇಳಿದಾಗ ಸಾಹೇಬ ನಿರುತ್ತರನಾದ !

ಜೂನ ೧೯೪೩ ರಲ್ಲಿ ನನ್ನ ಬಂಧನವಾಯಿತು. ಚಿದಂಬರ ಬೆಟಗೇರಿ ಸ್ವತಃ ಪೋಲೀಸರೊಂದಿಗೆ ಬಂದು ನನ್ನ ಸ್ಥಳ ತೋರಿಸಿದನೆಂಬದರಲ್ಲಿ ಯಾವ ಸಂಶಯವೂ ಉಳಿಯಲಿಲ್ಲ. ಈ ಸುದ್ದಿಯನ್ನು ನಾನು ಹೊರಗೆ ಹೇಳಿ ಕಳಿಸಿದೆ. ಚಿದಂಬರ ಬೆಟಗೇರಿಯನ್ನು ಫಿತೂರಿಯ ನಿಂದ್ಯ ಪಾಪಕರ್ಮಕ್ಕಾಗಿ ಶಿಕ್ಷಿಸುವದು ನಮ್ಮ ಜನರಿಗೆ ತೀರ ಸುಲಭ ಕೆಲಸವಾಗಿದ್ದರೂ ಅಹಿಂಸೆಯ ಪಥ್ಯ ಪಾಲನೆಯ ಕಾರಣದಿಂದ ಅವನ ಮೈಗೆ ಯಾರೂ ಕೈಹಚ್ಚಲಿಲ್ಲ. ಬೆಟಗೇರಿಗೆ ೫ ಸಾವಿರ ರೂಪಾಯಿ ರೋಖ ಸಿಕ್ಕದ್ದೂ ತಿಳಿಯಿತು. ಅಂದು ರಾತ್ರಿ ನನ್ನ ಎರಡೂ ಕೈ ಬೇಡಿಯಿಂದ ಹಿಂಬದಿಗೆ ಕಟ್ಟಿ ವಿಜಾಪೂರ ಲಾಕಪ್ಪದಲ್ಲಿ ಪೂರ್ಣವಾಗಿ ಒಂದು ದಿನ ಕೆಡವಿ ಮರುದಿನ ಬೆಳಗಾವಿಗೆ ತಂದು ಕೆಂಟೊನ್‌ಮೆಂಟ ಲಾಕಪ್ಪದಲ್ಲಿ ಇಟ್ಟರು. ದಿನಾಲು ಜೈನಾಪುರ ಸಿ. ಆಯ್, ಡಿ,ಸಬ್ ಇನಸ್ಪೆಕ್ಟರರು ನನ್ನ ಕಡೆಗೆ ಬಂದು ನಾವು ಸುಟ್ಟ ಸುಲಧಾಳ ಸ್ಟೇಶನ್, ನಂದಿ ಬಂಗ್ಲೆ ಕುಲಕರ್ಣಿ ದಪ್ತರ ಮುಂತಾದ ಬಗ್ಗೆ ಮಾಹಿತಿ ಕೊಡಬೇಕೆಂದು ವಿನಂತಿಸಿದರು. ಹೆದರಿಸಿದರು, ಬೆದರಿಸಿದರು. ನಾನು ಒಂದೇ ಒಂದು ವಾಕ್ಯ ಹೇಳುತ್ತಿದ್ದೆ " ಬ್ರಿಟಿಶ ಸರಕಾರದ ವಿರುದ್ಧ ಏನನ್ನು ಮಾಡಲು ಶಕ್ಯವಿತ್ತೋ ಅದನ್ನೆಲ್ಲ ಮಾಡಿದ್ದೇನೆ. ಬೇಕಾದಷ್ಟು ಖಿಟ್ಲೆ ಹಾಕಿರಿ " ಎಂಬುದೇ ನನ್ನ ಹೇಳಿಕೆ ಯಾಗಿತ್ತು., ಬಾಯಿಯಿಂದ ಬೇಕಾದಷ್ಟು ಹೆದರಿಕೆ ಬೆದರಿಕೆ ಹಾಕಿದರೂ ಯಾರೂ ನನ್ನ ಮೈಗೆ ಎಂದೂ ಕೈಹಚ್ಚಲಿಲ್ಲ! ೨೦ ದಿನಗಳ ನಂತರ ನನ್ನನ್ನು ಹಿಂಡಲಗಿಗೆ ಕಳಿಸಿದರು ಯಾವುದೋ ಒಂದು ಖಿಟ್ಲೆ ಹಾಕಿ ೭ ತಿಂಗಳ ಶಿಕ್ಷೆ ಕೊಟ್ಟರು. ಶಿಕ್ಷೆಯ ಅವಧಿ ತೀರುತ್ತಲೇ ಜೇಲಿನಿಂದ ಬಿಡುಗಡೆಯಾಯಿತು. ಆದರೆ ಜೇಲ ಬಾಗಿಲ ಹೊರಗೆ ಕಾಯುತ್ತ ಕುಳಿತ ಪೋಲೀಸರು ಕೂಡಲೆ ನನ್ನನ್ನು ಎತ್ತಿ ಜೇಲಿನಲ್ಲಿ ಒಗೆದರು. ಡೆಟನ್ಯೂ ಅಂತ ಮುಂದೆ ಸುಮಾರು ೧॥ ವರುಷ ನಾನು ಜೇಲಿನಲ್ಲಿ ಉಳಿದೆ.

ಚನ್ನಪ್ಪಾ ವಾಲಿ ಅವರ ಬಂಧನ.

ನನ್ನ ಬಂಧನವಾದ ನಂತರ ಜೂನ ೧೨ ಕ್ಕೆ ಬೆಂಗಳೂರಿನಲ್ಲಿ ವಾಲಿ ಚನ್ನಪ್ಪ ನವರನ್ನೂ ಫಿತೂರಿಯಿಂದ ಬಂಧಿಸಲಾಯಿತು.

ಅನೇಕ ಸಲ ಪೋಲೀಸರು ಮನೆಗೆ ಮುತ್ತಿಗೆ ಹಾಕಿ ಅವರನ್ನು ಬಂಧಿಸುವ ಪ್ರಯತ್ನ ಮಾಡಿದರೂ ಬೇಟೆ ಕೈಗೆ ಹತ್ತಲಿಲ್ಲವೆಂದು ನಿರಾಶರಾಗಿ ಆಸ್ಟ್ರೇಲಿಯನ್

ಮಿಲಿಟರಿ ತಂದು ಸಂಪಗಾಂವಿ, ನೇಗಿನಹಾಳ, ಊರುಗಳನ್ನೇ ರಾತ್ರಿ ಮುತ್ತಿ ಪ್ರತಿಯೊಂದು ಮನೆಯನ್ನು ಶೋದಿಸಿದರು, ಆದರಲ್ಲಿಯೂ ಅವರಿಗೆ ಯಶ ಬರಲಿಲ್ಲ. ದೇವಲಾಪುರ ಭೂಮಿಯಲ್ಲಿ ವಾಲಿಯವರು ಇದ್ದಾಗ ನಮ್ಮವರಂತೆ ನಟಿಸುತ್ತ ಶ್ರೀ ಬಸಪ್ಪ ಬುದಕ್ಕನವರ ಎಂಬವನು ಫಿತೂರಿಯಾಗಿ ಹಿಡಿದುಕೊಡುವ ಪ್ರಯತ್ನ ಮಾಡಿದ. ಶ್ರೀ, ಸಂಕನಗೌಡಾ ಪಾಟೀಲರೊಂದಿಗೆ ಚರ್ಚೆ ಮಾಡುತ್ತ ಕುಳಿತಾಗ ಈ ಬಸಪ್ಪ ಬುದಕ್ಕನವರ ಅಲ್ಲಿಗೆ ಬಂದ. ಊಟದ ವೇಳೆಯಾಗುತ್ತ ಬಂದಿತ್ತು. ಇಂದು ಕರಿಗಡಬು ತರುತ್ತೇನೆ, ಇಲ್ಲಿಯೇ ಇರ್ರಿ, ಎಂದು ಹೇಳಿ ಬುದಕ್ಕನವರನು ಊರಿಗೆ ಹೋದ. ಕರಿಗಡಬು ತುಪ್ಪದ ಗೂಡ ಪೋಲೀಸರನ್ನೂ ತಂದ. ಪೋಲೀಸರು ತಮ್ಮ ಕಡಗೇ ಬರುತ್ತಿದ್ದಾರೆಂದು ತಿಳಿದ ಕೂಡಲೆ ವಾಲಿಯವರು ಅಡ್ಡ ದಾರಿಯಿಂದ ಕರೀ ಕಟ್ಟಿಗೆ ಹೋದರು. ಬುದಕ್ಕನವರ ಬಸಪ್ಪ ಕರಿಗಡಬು ತುಪ್ಪ ಶ್ರೀ. ವಾಲಿಯವರು ಇದ್ದ ಸ್ಥಳಕ್ಕೆ ತಂದು ಇಟ್ಟು ವಾಲಿಯವರನ್ನು ಹೊಲತುಂಬ ತಿರುಗಾಡಿ ಶೋಧಿಸಿದರೂ ಅವರು ಸಿಗಲಿಲ್ಲ. ಆಗ ಡಿ. ವಾಯ್. ಎಸ್. ಪಿ. ಯವರು ಅವನನ್ನು ಬೂಟ ಗಾಲಿನಿಂದ ಒದ್ದು "ಬದಮಾಷ ಸುಳ್ಳು ಹೇಳಿ ಇಷ್ಟು ಪೋಲೀಸರನ್ನು ಯಾಕೆ ಕರೆದುಕೊಂಡು ಬಂದಿ" ಅನ್ನುತ್ತ ಹೊಡೆಯಹತ್ತಿದರು. "ಸಾಹೇಬರೇ ಹೊಡೆಯ ಬೇಡಿರಿ. ಒಂದು ತಾಸಿನ ವೊದಲು ಎಲ್ಲರೂ ಇಲ್ಲಿಯೇ ಇದ್ದರು. ಈಗ ಎಲ್ಲಿಯೋ ಹೋಗಿದ್ದಾರೆ. "ದೇವರ ಆಣೆ ಮಾಡಿ ಹೇಳುತ್ತೇನೆ ನಾನು ಸುಳ್ಳು ಮಾತಾಡಿಲ್ಲ" ಎಂದು ಕೈಕಾಲು ಬಿದ್ದು ಹೇಳಹತ್ತಿದ. ಪೋಲೀಸರಿಗೆ ಬಸಪ್ಪನು ಕರಿಗಡಬು ತಿನಸಿದರೆ ವಾಲಿಯವರು ಚಳ್ಳ ಹಣ್ಣು ತಿನಿಸಿದರು.

ಹೊಲದೊಳಗಿನ ಬೆಳೆಗಳೆಲ್ಲ ಕೊಯ್ದು ಹೋಗಿದ್ದವು. ಚಳವಳಿಯ ಕಾವೂ ಆರಿತ್ತು. ಪೋಲೀಸರಿಂದ ತಪ್ಪಿಸಿಕೊಂಡು ಇರುವದೊಂದೇ ಮುಖ್ಯ ಕೆಲಸವಾಗಿತ್ತು. ಆದ್ದರಿಂದ ಅತ್ತಿತ್ತ ತಿರುಗಾಡಿ ಕಾಲಕಳೆಯುವ ಪ್ರಸಂಗ ಕಾರ್ಯಕರ್ತರಿಗೆ ಬಂತು. ಶ್ರೀ. ವಾಲಿಯವರು ಮುಂದೆ ಹಂಪಿ, ಬಳ್ಳಾರಿ, ಹೊಸಪೇಟೆ, ಬೆಂಗಳೂರ, ಮದ್ರಾಸ ಗಳಲ್ಲಿ ಕೆಲದಿನ ಕಾಲ ಕಳೆದು ಬೆಂಗಳೂರಿಗೆ ಬುದರು. ಇವರ ಆಪ್ತರಾದ ಶ್ರೀ, ಚೆನ್ನ ವೀರಪ್ಪ ಎಂಬವರು ಬೆಂಗಳೂರಲ್ಲಿ ಆಯ್. ಜಿ. ಆಫೀಸಿನಲ್ಲಿ ಟಾಯಿಪಿಸ್ಟರಾಗಿದ್ದರು. (ಇವರೇ ಮುಂದೆ ಶ್ರೀ. ನಿಜಲಿಂಗಪ್ಪನವರು ಹಾಗೂ ಜತ್ತಿಯವರು ಮುಖ್ಯ ಮಂತ್ರಿ ಗಳಿದ್ದಾಗ ಅವರ ಪಿ. ಎ. ಆಗಿದ್ದರು). ಅವರ ಮನೆಯಲ್ಲಿ ಕೆಲದಿನ ಉಳಿದುಕೊಂಡು ಮುಂದೆ ಶ್ರೀ, ಚಂಡೂರ ಎಂಬ ಡಾಕ್ಟರರ ಮನೆಯಲ್ಲಿ ಇರಲು ಹೋದರು. ಡಾಕ್ಟರರ ಅಣ್ಣಂದಿರು ಕಮ್ಯುನಿಷ್ಟರಾಗಿದ್ದರು. ಆಗ ಸರಕಾರಕ್ಕೆ ಸಹಾಯ ಮಾಡುತ್ತಿದ್ದ ಕಮ್ಯು ನಿಷ್ಟರು ನಮ್ಮ ಶತ್ರುಗಳೆಂದು ತಿಳಿದು ಶ್ರೀ, ವಾಲಿಯವರು ಕೆಲದಿನ ಚಾಮರಾಜ ಪೇಟೆಯಲ್ಲಿಯ ಅನಾಥಾಶ್ರಮಕ್ಕೆ ಹೋಗಿ ಅಲ್ಲಿ ಕಲ ದಿನ ಉಳಿದರು. ಮುಂದೆ ಒಂದು ದಿನ ಒಂದು ಮುಸಲ್ಮಾನರ ಲಾಯಬ್ರರಿಗೆ ಶ್ರೀ. ವಾಲಿಯವರು ಹೋದಾಗ ಅಲ್ಲಿ ಏನೋ ಮೋಸವಾಯಿತು. ಆ ಲಾಯಬ್ರರಿಯು ಸಿ. ಆಯ್. ಡಿ. ಗಳ ಸ್ಥಳವಾಗಿತ್ತು, ಶ್ರೀ. ವಾಲಿಯವರು ಕ್ಯಾಂಟೋನ್‌ಮೆಂಟ ಕಡೆಗೆ ತಿರುಗಾಡಲು ಹೋದಾಗ

ಡಾ. ಚಂಡೂರ ಅವರು ಸಾಯಂಕಾಲ ಮೇಲಿಂದ ಬಂದು "ಪೋಲೀಸರು ಹಿಂದೆ ಹಿಂದೆ ಬರಹತ್ತಿದ್ದಾಳೆ" ಎಂದು ಹೇಳಿದರು. ಅಷ್ಟರಲ್ಲಿ ಪೋಲೀಸರು ಬಂದೇ ಬಿಟ್ಟರು. ಶ್ರೀ. ವಾಲಿಯವರ ಬಂಧನವಾಗಿ ಅವರನ್ನು ಬೆಳಗಾವಿಯ ಕ್ಯಾಂಪ ಲಾಕಪ್ಪದಲ್ಲಿ ತಂದಿಟ್ಟರು. ಶ್ರೀ. ಚಂಡೂರ ಡಾಕ್ಟರರನ್ನೂ ಪೋಲೀಸರು ಹಿಡಿದು ತಿಂಗಳಲ್ಲಿಯೇ ಬಿಟ್ಟರು. ಇದೆಲ್ಲ ಡಾಕ್ಟರ ಚಂಡೂರ ಅವರ ಫಿತೂರಿ ಎಂದು ಎಲ್ಲರೂ ಆಡಿ ತೋರಿಸ ಹತ್ತಿದರು, ಅವರನ್ನೂ ಪೋಲೀಸರು ಹಿಡಿದ ಕಾರಣ ಅವರು ಫಿತೂರಿಗಳಿರಲಿಕ್ಕಿಲ್ಲವೆಂದು ಶ್ರೀ. ಚನ್ನಪ್ಪ ವಾಲಿಯವರು ಭಾವಿಸಿದರು. ಆದರೆ ಅದೆಲ್ಲ ಪೋಲೀಸರ ಕುತಂತ್ರಗಳಿರ ಬಹುದೆಂದು ಇಂದಿಗೂ ಅನಿಸುತ್ತದೆ. ಬಹುಮಾನದ ೫೦೦೦ ರೂಪಾಯಿಗಳನ್ನು ಯಾವನೋ ಒಬ್ಬ ಫರೀದಸಾಹೇಬ ಎಂಬವನಿಗೆ ಕೊಡಲಾಯಿತೆಂದು ಮುಂದೆ ತಿಳಿದು ಬಂತು. ಯಾರವಾದರೂ ಹೆಸರು ಮುಂದೆ ಮಾಡಿ ನಿಜ ಹೆಸರು ತಿಳಿಯದಂತೆ ಪೋಲೀಸರು ದಕ್ಷತೆಯನ್ನೂ ಪ್ರಕಟಿಸುತ್ತಿದ್ದರು. ಇದೂ ಅವರ ಒಂದು ತಂತ್ರವಾಗಿತ್ತು.

ಶ್ರೀ. ವಡವಿಯವರ ಬಂಧನ

ಶ್ರೀ. ವಡವಿಯವರೂ ಅತ್ಯುತ್ಸಾಹದಿಂದ ಅಲೆದಾಡಿ ಬೇಸತ್ತಿದ್ದರು. ಎಲ್ಲ ಸಹಕಾರಿಗಳನ್ನು ಒಬ್ಬೊಬ್ಬರಂತೆ ಪೋಲೀಸರು ಹಿಡಿದು ಜೇಲಿಗೆ ಕಳಿಸಿದ್ದರು. ಕೆಲಸವೂ ಮುಗಿಯುತ್ತ ಬಂದಿತ್ತು. ಬುಲೆಟಿನ್‌ಗಳನ್ನಾದರೂ ತೆಗೆಯೋಣವೆಂದು ಶ್ರೀ. ವಡವಿಯವರು ಬೆಳಗಾವಿಗೆ ಬಂದು ಘುಲಬಾಗಗಲ್ಲಿಯ ಒಂದು ಕೋಣೆಯಲ್ಲಿ ಇರಹತ್ತಿದರು. ಅವರ ಜೊತೆಗೆ ಶ್ರೀ. ಶಂಕರ ಗಣಗಲಿ (ದಡ್ಡಿಯ ಹತ್ತರದ ನೇಸರಿಗಿ ಊರವರು) ಎಂಬ ಕಾರ್ಯಕರ್ತನೂ ಇರುತ್ತಿದ್ದ. ಕಳೆದ ೮-೧೧ ವರುಷ ಇವನು ಆಗಾಗ ಚಳವಳಿಯ ಕೆಲಸ ಮಾಡುತ್ತಿದ್ದರಿಂದ ಅವನ ಮೇಲೆ ಸಂಶಯ ತೆಗೆದುಕೊಳ್ಳುವಂತಿದ್ದಿಲ್ಲ, ಆದರೆ ಅವನೇ ಫಿತೂರಿಯಾಗಿ ಬಿಟ್ಟ. ಒಂದು ದಿನ ಪೋಲೀಸರು ಬಂದು ಇಡೀ ಓಣಿಯನ್ನು ಮುತ್ತಿ ಶ್ರೀ. ವಡವಿಯವರು ಇದ್ದ ಮನೆಯನ್ನೂ ಮುತ್ತಿದರು. ಆಗ ಶ್ರೀ. ವಡವಿಯವರು ಸಂಡಾಸಕ್ಕೆ ಹೋಗಿದ್ದರು. ಪೋಲೀಸರು ಬಂದು ಸಂಡಾಸದ ಬಾಗಿಲ ಬಡೆದು ಒಳಗೆ ಇರುವರೆಂದು ನಿಶ್ಚಿತ ಮಾಡಿಕೊಂಡರು. ಹೊರಗೆ ಬರುತ್ತಲೇ ಬಂಧಿಸಿ ಹಿಂಡಲಗಿಗೆ ಕಳಿಸಿದರು. ನಮ್ಮ ಕಾರ್ಯಕರ್ತನಂತೆ ನಟಿಸಿಯೇ ಶ್ರೀ. ಕಣಗಲಿಯು ಶ್ರೀ. ವಡವಿಯವರನ್ನು ಹಿಡಿದುಕೊಟ್ಟನು.

ಅಂತೂ ೫ ಸಾವಿರ ರೂಪಾಯಿ ಬಹುಮಾನ ಧಾರಿಗಳಾಗಿದ್ದ ಐವರಲ್ಲಿ ನಾಲ್ವರನ್ನು ಫಿತೂರಿಯಿಂದ ಹಿಡಿಯಲಾಯಿತು. ಐದನೇಯವರೂ ನಮ್ಮ ಜಿಲ್ಲೆಯ ಸೇನಾಪತಿಗಳೂ ಆಗಿದ್ದ ಶ್ರೀ. ವಾಮನರಾವ ಬಿದರಿಯವರು ಕಡೆತನಕ ಪೋಲೀಸರಿಗೆ ಚಳ್ಳಹಣ್ಣು ತಿನ್ನಿಸಿದರು. ಮಂಕಬೂದಿ ಬದದರು. ಅವರು ಕಡೆತನಕ ಸಿಗಲೇ ಇಲ್ಲ. ೧೯೪೪ರ ಆಗಸ್ಟ ೯ನೇ ದಿನಾಂಕದಂದು ಗಾಂಧೀಜಿಯವರ ಆಜ್ಞೆಯಂತೆ ಅವರು ಜಿಲ್ಲಾ ಕಾಂಗ್ರೆಸ ಕಚೇರಿಯಲ್ಲಿ ಪೋಲೀಸರಿಗೆ ತಿಳಿಸಿ ಪ್ರಕಟವಾಗಿ ಬಂಧಿತರಾದರು.